# ಕನ್ನಡ ಚಲನಚಿತ್ರಗಳ ಬೆಳವಣಿಗೆಯಲ್ಲಿ ರಂಗಭೂಮಿ ಪ್ರಭಾವ

**ಶಂಭನಗೌಡ ನೀರಲಗಿ***

**DOI: https://doi.org/10.5281/zenodo.22107278**

**ABSTRACT**

ರಂಗಭೂಮಿ ಮತ್ತು ಚಲನಚಿತ್ರವು ಸಮಾಜದ ಸಾಂಸ್ಕೃತಿಕ ಹಾಗೂ ಕಲಾತ್ಮಕ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮಗಳಾಗಿವೆ. ರಂಗಭೂಮಿಯು ನೇರವಾಗಿ ಪ್ರೇಕ್ಷಕರೊಂದಿಗೆ ಸಂವಹನ ನಡೆಸುವ ಮೂಲಕ ಅಭಿನಯ, ಸಂಭಾಷಣೆ, ಸಂಗೀತ, ಬೆಳಕು ಮತ್ತು ರಂಗಸಜ್ಜಿಕೆಯಂತಹ ಅಂಶಗಳನ್ನು ಒಳಗೊಂಡಿದ್ದು, ಚಲನಚಿತ್ರವು ರಂಗಭೂಮಿಯ ಅಭಿನಯ, ಕಥನ, ಸಂಭಾಷಣೆ, ಮತ್ತು ದೃಶ್ಯಾತ್ಮಕತೆಯ ಹಲವು ಅಂಶಗಳನ್ನು ಅಳವಡಿಸಿಕೊಂಡು ತಂತ್ರಜ್ಞಾನದ ನೆರವಿನಿಂದ ವಿಶಾಲ ಪ್ರೇಕ್ಷಕರನ್ನು ತಲುಪಿದೆ. ರಂಗಭೂಮಿಯು ಚಲನಚಿತ್ರದ ಕಥಾವಸ್ತು, ಅಭಿನಯ, ಶೈಲಿ, ನಿರ್ದೇಶನ, ಮತ್ತು ದೃಶ್ಯ ಮಾಧ್ಯಮಗಳು ರಂಗಭೂಮಿಯಲ್ಲಿಯೂ ಹೊಸ ಪ್ರಯೋಗಗಳಿಗೆ ಪ್ರೇರಣೆ ನೀಡಿವೆ. ಹೀಗಾಗಿ ರಂಗಭೂಮಿ ಮತ್ತು ಚಲನಚಿತ್ರ ಪರಸ್ಪರ ಪ್ರಭಾವ ಬೀರುತ್ತಾ ಕನ್ನಡ ಸೇರಿದಂತೆ ಭಾರತೀಯ ಕಲಾ ಸಂಸ್ಕೃತಿಯ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿವೆ.

**KEYWORDS:** ಸಿನಿಮಾ, ರಂಗಭೂಮಿ, ನಾಟಕ, ಸಾಹಿತಿಗಳು, ಕಲಾವಿದರು, ನಟ–ನಟಿಯರು.

ರಂಗಭೂಮಿ ಎನ್ನುವುದು ಕೇವಲ ಮನರಂಜನೆಯ ಸಾಧನವಲ್ಲ, ಅದು ಸಮಾಜದ ಕನ್ನಡಿ ಮತ್ತು ಕಲೆಯ ಜೀವಂತ ರೂಪ. ಮಾನವನ ಇತಿಹಾಸದಷ್ಟೇ ಹಳೆಯದಾದ ಈ ಕಲೆ, ಇಂದಿಗೂ ತನ್ನದೇ ಆದ ವಿಶಿಷ್ಟ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದೆ. ತನ್ನದೇ ಆದ ಹಲವು ಆಯಾಮಗಳನ್ನು ಹೊಂದಿದ್ದು, ದೃಶ್ಯ, ಕಲೆ, ಹಾಗೂ ಮನರಂಜನಾ ಮಾಧ್ಯಮದ ಮೂಲಕ ತನ್ನ ಕ್ಷೇತ್ರವನ್ನು ವ್ಯಾಪಿಸಿಕೊಂಡಿದ್ದಷ್ಟೇ ಅಲ್ಲದೇ ಕನ್ನಡ ಚಲನಚಿತ್ರರಂಗದ ಮೇಲೆ ರಂಗಭೂಮಿಯ ಪ್ರಭಾವ ಬಹಳ ಆಳವಾದದ್ದು ಮತ್ತು ಐತಿಹಾಸಿಕವಾದದ್ದು. ಗುಬ್ಬಿ ವೀರಣ್ಣನವರ ನಾಟಕ ಕಂಪನಿಗಳ ಕಾಲದಿಂದ ಹಿಡಿದು ಇಂದಿನ ನವ್ಯ ಆಧುನಿಕ ಕಾಲಘಟ್ಟ ಹಾಗೂ ಪ್ರಯೋಗಾತ್ಮಕ ಚಿತ್ರಗಳವರೆಗೆ ರಂಗಭೂಮಿಯು ಕಥೆ, ನಟನೆ, ತಂತ್ರಜ್ಞಾನ ಮತ್ತು

* **ಶಂಭನಗೌಡ ನೀರಲಗಿ,** ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಮಹಾವಿದ್ಯಾಲಯ, ಹಾವೇರಿ.

ನಿರ್ದೇಶನದಲ್ಲಿ ಭದ್ರವಾದ ಬುನಾದಿಯನ್ನು ಒದಗಿಸಿದೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸುಮಾರು ಹದಿನೇಳನೆಯ ಶತಮಾನದವರೆಗೆ ನಮಗೆ ಯಾವುದೇ ನಾಟಕ ದೊರೆಯುವುದಿಲ್ಲ. ಸಿಂಗರಾರ್ಯನು ರಚಿಸಿದ 'ಮಿತ್ರವಿಂದಗೋವಿಂದ' ನಾಟಕ ಕನ್ನಡದ ಮೊದಲ ನಾಟಕ. ಇದು ಶ್ರೀ ಹರ್ಷನ ಶತಮಾನದ ಕೊನೆಯ ವೇಳೆಗೆ ಬೊಂಬಾಯಿ ಪಾರ್ಸಿ ಕಂಪನಿ ಮಹಾರಾಷ್ಟ್ರದ ಸಂಸ್ಕೃತದ ರತ್ನಾವಳಿ ನಾಟಕದ ಅನುವಾದವಾಗಿದೆ. ಆದರೆ ಹತ್ತೊಂಬತ್ತನೆಯ ಸಾಂಗ್ಲಿ ಕಂಪನಿಗಳು ಕರ್ನಾಟಕದಲ್ಲಿ ನಡೆಸಿದ ಪ್ರಯೋಗಗಳ ಪರಿಣಾಮವಾಗಿ ರಂಗಭೂಮಿಯ ಉದಯವಾಗಿದೆ. ಇದೇ ಅವಧಿಯಲ್ಲಿ ಇಂಗ್ಲೀಷ್, ಗ್ರೀಕ್, ಮತ್ತಿತರ ಪಾಶ್ಚಾತ್ಯ ಭಾಷೆಗಳ ಹಲವಾರು ನಾಟಕಗಳು ಕನ್ನಡಕ್ಕೆ ರೂಪಾಂತರಗೊಂಡಿವೆ.

ಪಂಪ, ರನ್ನ, ಕೇಶೀರಾಜ, ಕುಮಾರವ್ಯಾಸ, ಗೋವಿಂದವೈದ್ಯ, ರತ್ನಾಕರವರ್ಣಿ ಮೊದಲಾದವರು ನಾಟಕದ ಬಗೆಗೆ ಪ್ರಸ್ತಾಪವನ್ನು ಮಾಡಿರುವುದನ್ನು ಕಾಣಬಹುದು. ನಂತರ 1882ರಲ್ಲಿ ಅಭಿಜಾತ ರಂಗಭೂಮಿಗೆ ಭದ್ರ ಬುನಾದಿ ಹಾಕಿದರು. ಮೈಸೂರು ಮಹಾರಾಜ ಚಾಮರಾಜ ಒಡೆಯರ ಪ್ರೇರಣೆಯಿಂದ ಬಸವಪ್ಪಶಾಸ್ತ್ರಿ ಬರೆದ 'ಶಾಕುಂತಲ' ನಾಟಕದಿಂದಲೇ ನಮ್ಮ ರಂಗಭೂಮಿ ಪರಂಪರೆಯ ಇತಿಹಾಸವನ್ನು ನಾವು ಗುರುತಿಸುತ್ತೇವೆ.

1800 ರಿಂದೀಚೆಗೆ ಕನ್ನಡ ವೃತ್ತಿ ರಂಗಭೂಮಿ ತನ್ನ ಬೇರುಗಳನ್ನು ಬಲವಾಗಿ ಊರಿದ್ದಷ್ಟೇ ಅಲ್ಲ ಇಡೀ ದಕ್ಷಿಣ ಭಾರತಕ್ಕೆ ವ್ಯಾಪಿಸಿತು. ಭಾಷೆಯ ಗಡಿಗಳಿಲ್ಲದೆ ಸ್ವಚ್ಛಂದವಾಗಿ ಬೆಳೆದ ಕನ್ನಡ ರಂಗಭೂಮಿ ಅಪ್ರತಿಮ ನಾಟಕಕಾರರನ್ನು, ಕಲಾವಿದರನ್ನು, ವ್ಯವಹಾರ ಕುಶಲತೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿತು. 'ಕಂಪನಿ ನಾಟಕಗಳು' ಎಂದು ವೃತ್ತಿರಂಗಭೂಮಿಯ ನಾಟಕಗಳು ಜನಪ್ರಿಯವಾಗಿ ಮನರಂಜನೆಯ ಅನೇಕ ಸಾಧ್ಯತೆಗಳನ್ನು ಪರಿಚಯಿಸಿದವು. ಅಷ್ಟೇ ಅಲ್ಲದೇ ರಂಗಭೂಮಿಯಿಂದ ಬಂದಂತಹ ಕಲಾವಿದರು ನಾಟಕ ಕಂಪನಿಗಳಲ್ಲಿ ಬಣ್ಣ ಬಳಿಯುವುದರ ಮೂಲಕ ತಮ್ಮ ಬದುಕನ್ನು ಕಟ್ಟಿಕೊಳ್ಳುವುದರ ಜೊತೆ ಜೊತೆಗೆ ಚಲನಚಿತ್ರಕ್ಕೆ ಕಾಲಿಟ್ಟರು. ತರಬೇತಿ ಶಾಲೆಯಂತಿದ್ದ ನಾಟಕ ಕಂಪನಿಗಳಲ್ಲಿ ಹಗಲು ಇರುಳೆನ್ನದೇ ನಿರಂತರವಾಗಿ ನಟನೆ ಮಾಡುತ್ತ ಕಲಾವಿದರು ತಮ್ಮ ಬದುಕನ್ನು ಹಸನಾಗಿಸಿದ್ದು ಗಮನಾರ್ಹ.

ಭಾರತೀಯ ಚಲನಚಿತ್ರರಂಗದ ಮೇಲೆ ವೃತ್ತಿ ನಾಟಕಗಳು ಪ್ರಭಾವ ಬೀರಿರುವ ರೀತಿಯಲ್ಲಿಯೇ ಕನ್ನಡ ಚಿತ್ರರಂಗದ ಮೇಲೂ ಬೀರಿವೆ. ಭಾರತೀಯ ಚಲನಚಿತ್ರ ಪರಂಪರೆ ಆರಂಭವಾದದ್ದು ಧುಂಡಿರಾಜ್ ಗೋವಿಂದ ಫಾಲ್ಕೆ ನಿರ್ಮಿಸಿ ನಿರ್ದೇಶಿಸಿದ ರಾಜಾ ಹರಿಶ್ಚಂದ್ರ (1913) ಚಿತ್ರದ ಮೂಲಕ. ಆದರೂ ಮೂಕಿ ಚಿತ್ರರಂಗ ಮತ್ತು ಸೂತ್ರದ ಗೊಂಬೆಯಾಟಗಳು, ಕಥಾ ಚಿತ್ರಗಳಿಗಿಂತ ಹೆಚ್ಚಾಗಿ ಜನರಂಜನೆಯ ದೃಶ್ಯಗಳನ್ನು, ಹಾಸ್ಯ ಪ್ರಸಂಗಗಳನ್ನು ಚಿತ್ರಿಸಿ ಪ್ರದರ್ಶಿಸುವ ಕಡೆ ಹೆಚ್ಚು ವಾಲಿತ್ತು.

ಪಾರ್ಸಿ ರಂಗಭೂಮಿಯ ಪ್ರಭಾವದಿಂದಲೇ ಕರ್ನಾಟಕದಲ್ಲೂ ವೃತ್ತಿರಂಗಭೂಮಿಗಳು ತಲೆಯೆತ್ತಿದ್ದವು. ಅಲ್ಲದೇ, ಮರಾಠೀ ರಂಗಭೂಮಿಯ ಪ್ರಭಾವವನ್ನು ಪ್ರತಿರೋಧಿಸಲು ಗದಗಿನಲ್ಲಿ ಮೊದಲ ವೃತ್ತಿ ರಂಗಭೂಮಿ ಆರಂಭವಾಯಿತು. ಶಾಂತಕವಿ –ಬಾಳಾಚಾರ್ಯ ಗೋಪಾಳಚಾರ್ಯ ಸಕ್ಕರಿಯವರ ನೇತೃತ್ವದಲ್ಲಿ 1874ರಲ್ಲಿ ಸ್ಥಾಪನೆಯಾದ 'ಶ್ರೀ ವೀರನಾರಾಯಣ ಪ್ರಾಸಾದಿತ ಕೃತಪುರ ನಾಟಕ ಮಂಡಳಿ' ಕನ್ನಡದ ಮೊದಲ ವೃತ್ತಿ ನಾಟಕ ಕಂಪನಿ. ರಾಯಲ್ ಡ್ರಾಮಾಟಿಕ್ ಕಂಪನಿ ಎಂಬ ವೃತ್ತಿರಂಗಭೂಮಿ ಸಂಸ್ಥೆಯನ್ನು ಹುಟ್ಟುಹಾಕಿತು. ಇಂತಹ ನಾಟಕ ಕಂಪನಿಗಳ ಮೂಲಕ ಕನ್ನಡ ಚಲನಚಿತ್ರೋದ್ಯಮವು ತನ್ನ

ಆರಂಭದ ದಿನಗಳಲ್ಲಿ ಕಥಾವಸ್ತುವಿಗೆ ಸಂಪೂರ್ಣವಾಗಿ ತನ್ನ ಸಂಸ್ಕೃತಿಯಲ್ಲಿ ಸಂಪದ್ಭರಿತವಾಗಿದ್ದ ಪುರಾಣದ ಕತೆಗಳು, ಜಾನಪದೀಯ ಅಂಶಗಳನ್ನು, ಚಾರಿತ್ರಿಕ ಘಟನೆಗಳನ್ನು ಮತ್ತು ಜಾನಪದದ ರಮ್ಯಲೋಕವನ್ನೇ ನೆಚ್ಚಿಕೊಂಡಿತ್ತು. ತಾಂತ್ರಿಕ ಸಾಧ್ಯತೆಗಳನ್ನು ಬಳಸಿಕೊಂಡು ಸಿನಿಮಾ ಮಾಧ್ಯಮವು ರಂಗಭೂಮಿಗಿಂತ ಬಹುದೊಡ್ಡ ಭ್ರಮಾಲೋಕವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಯಿತು.

ಕನ್ನಡದ ಮೊದಲ ಮಾತಿನ ಸಿನಿಮಾ 'ಸತಿ ಸುಲೋಚನಾ' ಸಹ ಬೆಳ್ಳಾವೆ ನರಹರಿಶಾಸ್ತ್ರಿಗಳ ನಾಟಕವನ್ನು ಆಧರಿಸಿತ್ತು. ಇದರಲ್ಲಿ ಪಾಲ್ಗೊಂಡ ಕಲಾವಿದರು, ನಿರ್ದೇಶಕರು, ಸಂಗೀತ ಸಂಯೋಜಕರೆಲ್ಲ ರಂಗಭೂಮಿಯ ಕಲಾವಿದರೇ! ಕಿರುತೆರೆಯಲ್ಲಿ ಬಣ್ಣವನ್ನು ಬಳಿದು ಇವರು ರಂಗಭೂಮಿಯಿಂದ ಸಿನಿಮಾ ಮಾಧ್ಯಮಕ್ಕೆ ಬಂದರು, ಹೊಸದೊಂದು ಕ್ರಾಂತಿಯನ್ನೇ ಆರಂಭಿಸಿದರು. ಮೊದಲು ಸೆಟ್ ಏರಿದರೂ ಎರಡನೇ ಚಿತ್ರವಾಗಿ ಬಿಡುಗಡೆಯಾದ 'ಭಕ್ತಧ್ರುವ' ಚಿತ್ರದಲ್ಲಿಯೂ ಬಹುತೇಕ ಕಲಾವಿದರು, ತಂತ್ರಜ್ಞರು ನಾಟಕಗಳಲ್ಲಿ ತೊಡಗಿಸಿಕೊಂಡಿದ್ದವರೇ ಆಗಿದ್ದರು. ನಾಯಕ ಇಂದ್ರಜಿತುವಿನ ಪಾತ್ರ ವಹಿಸಿದ ದಿವಂಗತ ಎಂ.ವಿ. ಸುಬ್ಬಯ್ಯನಾಯ್ಡುರವರು ಕನ್ನಡ ರಂಗಭೂಮಿ ಮತ್ತು ಚಲನಚಿತ್ರ ರಂಗದ ಅಭಿಜಾತ ಕಲಾವಿದರೊಬ್ಬರು. ರಂಗಭೂಮಿಯಲ್ಲಿ ಅನೇಕ ಪ್ರಯೋಗ ನಡೆಸಿದವರು. ಸತಿಸುಲೋಚನಾ ಚಿತ್ರದಲ್ಲಿ ರಾವಣನ ಪಾತ್ರ ವಹಿಸಿದ್ದ ಅಭಿಜಾತ ರಂಗಕಲಾವಿದ ಆರ್. ನಾಗೇಂದ್ರರಾಯರ ಜೊತೆಗೂಡಿ ನಾಯ್ಡು ಅವರು ಶ್ರೀ ಸಾಹಿತ್ಯ ಸಾಮ್ರಾಜ್ಯ ಮಂಡಳಿಯನ್ನು ಹುಟ್ಟುಹಾಕಿದರು. ನಾಯ್ಡು–ರಾಯರು ಅಣ್ಣ ತಮ್ಮಂದಿರಂತೆ ಶ್ರೀ ಸಾಹಿತ್ಯ ಸಾಮ್ರಾಜ್ಯ ಮಂಡಳಿಯನ್ನು ಹದಿನೇಳು ವರ್ಷಕಾಲ ಮುನ್ನಡೆಸಿ ಮಾತಿನ ವಸಂತಸೇನಾ(1941), ಸತ್ಯ ಹರಿಶ್ಚಂದ್ರ(1943) ಮತ್ತು ಮಹಾತ್ಮಾ ಕಬೀರ್(1947) ನಿರ್ಮಿಸಿದರು. ಕೇವಲ ಪುರಾಣ, ಇತಿಹಾಸ ಮತ್ತು ಭಕ್ತರ ಕತೆಗಳನ್ನೇ ನೆಚ್ಚಿ ಕುಳಿತಿದ್ದ ಭಾರತೀಯ ಚಲನಚಿತ್ರರಂಗಕ್ಕೆ ಸಾಮಾಜಿಕ ವಸ್ತುವನ್ನು ದೊಡ್ಡ ಮಟ್ಟದಲ್ಲಿ ಪರಿಚಯಿಸಿದ್ದು ಕನ್ನಡ ಚಿತ್ರರಂಗ. 1931ರಲ್ಲಿ ತಯಾರಾದ 'ಸಂಸಾರ ನೌಕೆ' ಚಿತ್ರವು ಸಮಕಾಲೀನ ಸಾಂಸಾರಿಕ ವಸ್ತುವನ್ನು ಕುರಿತದ್ದಾಗಿತ್ತು. ಇದೂ ಸಹ ಎಚ್.ಎಲ್.ನರಸಿಂಹಾಚಾರ್ಯರ ರಂಗಕೃತಿಯನ್ನು ಆಧರಿಸಿತ್ತು.

ಆರಂಭದ ದಿನಗಳಲ್ಲಿ ಕನ್ನಡ ಚಿತ್ರರಂಗವನ್ನು ಉಳಿಸಿ ಬೆಳೆಸಿದ ಕೀರ್ತಿ ನಾಟಕ ಸಂಸ್ಥೆಗಳು ಮತ್ತು ರಂಗಕಲಾವಿದರು, ಸಂಘಟಕರಿಗೆ ಸಲ್ಲುತ್ತದೆ. ಮುಖ್ಯವಾಗಿ ಹೆಸರಿಸಬೇಕಾದ ನಾಟಕ ಸಂಸ್ಥೆ ಮತ್ತು ವ್ಯಕ್ತಿಗಳೆಂದರೆ ಗುಬ್ಬಿ ಕಂಪನಿ, ಶ್ರೀ ಸಾಹಿತ್ಯ ಸಾಮ್ರಾಜ್ಯ ಮಂಡಳಿ, ಬಿ.ಆರ್.ಪಂತುಲು ಮತ್ತು ಬಿ.ಎಸ್. ರಂಗಾ ಅವರು. ರಂಗಭೂಮಿಯ ಹಿನ್ನೆಲೆಯಿಲ್ಲದೆ ಬಂದ ಮಹಾತ್ಮಾ ಪಿಕ್ಚರ್ಸ್ ರವರ ಕಾಣಿಕೆ ಅಷ್ಟೇ ಸ್ಮರಣ ಯೋಗ್ಯ. ಗುಬ್ಬಿ ಕರ್ನಾಟಕ ಫಿಲಂಸ್ ಸಂಸ್ಥೆಯನ್ನು ಸ್ಥಾಪಿಸಿ ಚಿತ್ರರಂಗಕ್ಕೆ ಬಂದ ವೀರಣ್ಣನವರು ಸದಾರಮೆ (1935), ಸುಭದ್ರ (1941), ಜೀವನ ನಾಟಕ (1942), ಹೇಮರೆಡ್ಡಿ ಮಲ್ಲಮ್ಮ (1945), ಗುಣಸಾಗರಿ (1953) ಮೊದಲಾದ ಚಿತ್ರಗಳನ್ನು ನಿರ್ಮಿಸಿದರು. ಅವರು ತೆರೆಗೆ ಅಳವಡಿಸಿದ ನಾಟಕ 'ಬೇಡರ ಕಣ್ಣಪ್ಪ' (1954) ಕನ್ನಡ ಚಿತ್ರರಂಗದ ಗತಿಯನ್ನೇ ಬದಲಿಸಿತು. ಆ ಚಿತ್ರದ ಮೂಲಕ ರಾಜ್‌ಕುಮಾರ್, ಟಿ.ಆರ್.ನರಸಿಂಹರಾಜು ಚಲನಚಿತ್ರ ರಂಗಕ್ಕೆ ದೊಡ್ಡ ರೀತಿಯಲ್ಲಿ ಪದಾರ್ಪಣೆ ಮಾಡಿದರು. ಜಿ.ವಿ. ಅಯ್ಯರ್, ಹೊನ್ನಪ್ಪ ಭಾಗವತರ್, ಡಿ. ಕೆಂಪರಾಜ ಅರಸ್ ಅಂಥ ಅಪ್ರತಿಮ ನಾಟಕ ಕಲಾವಿದರಿಗೆ ಕನ್ನಡದಲ್ಲಿ ಅವಕಾಶ ಕಲ್ಪಿಸಿದವರು ವೀರಣ್ಣನವರು. ಅಷ್ಟೇ ಅಲ್ಲ, ಉದಯಕುಮಾರ್, ಬಾಲಕೃಷ್ಣ, ಬಿ.ಆರ್. ರಾಘವೇಂದ್ರ ರಾವ್, ಈಶ್ವರಪ್ಪ, ಮಹಾಬಲ ರಾಯರು, ಸಿ.ಬಿ. ಮಲ್ಲಪ್ಪ, ಡಿಕ್ಕಿ ಮಾಧವರಾವ್, ತಮಾಷಾ ಮಾಧವರಾವ್

ಗುಬ್ಬಿ ಕಂಪೆನಿಯ ಉತ್ಪನ್ನಗಳೇ! ಕನ್ನಡಕ್ಕೆ ಮೊಟ್ಟ ಮೊದಲ ಬಾರಿಗೆ ನಟನೆಗಾಗಿ ರಾಷ್ಟ್ರೀಯ ಪ್ರಶಸ್ತಿ ಪಡೆದ ಎಂ.ವಿ. ವಾಸುದೇವರಾವ್ ಗುಬ್ಬಿ ಕಂಪೆನಿಯಲ್ಲಿ ಬಾಲನಟರಾಗಿ ಪ್ರವರ್ಧಮಾನಕ್ಕೆ ಬಂದವರು. ಕಾಡು ಚಿತ್ರದ ಕಿಟ್ಟಿ ಪಾತ್ರಕ್ಕಾಗಿ ಅತ್ಯುತ್ತಮ ಬಾಲನಟ ರಾಜ್ಯ-ರಾಷ್ಟ್ರ ಪ್ರಶಸ್ತಿ ಗಳಿಸಿದ ಮಾಸ್ಟರ್ ನಟರಾಜ್ ವೀರಣ್ಣನವರ ಮೊಮ್ಮಗ. ಪ್ರಥಮ ವಾಕ್ಚಿತ್ರದ ನಾಯಕಿ ತ್ರಿಪುರಾಂಬ, ಕಂಠಶ್ರೀಗೆ ಹೆಸರಾಗಿದ್ದ ಕೆ.ಅಶ್ವಥಮ್ಮ, ಸ್ವರ್ಣಮ್ಮ ಮುಂತಾದವರು ರಂಗಭೂಮಿಯಲ್ಲೂ ರಸಿಕರನ್ನು ರಂಜಿಸಿದವರು. ನಿರ್ಮಾಣ, ವಿತರಣೆ ಮತ್ತು ಪ್ರದರ್ಶನ ಕ್ಷೇತ್ರಗಳಲ್ಲಿ ಚಲನಚಿತ್ರರಂಗಕ್ಕೆ ಸೇವೆ ಸಲ್ಲಿಸಿದ ಗುಬ್ಬಿ ವೀರಣ್ಣನವರ ಮೂಲಕವೇ ''ಶ್ರೀ ಕಂಠೀರವ ಸ್ಟುಡಿಯೊ'' ಸ್ಥಾಪನೆಯಾದದ್ದು ಮತ್ತೊಂದು ಇತಿಹಾಸ.

ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ನಿರ್ದೇಶಕ ಎಚ್.ಎಲ್. ಎನ್. ಸಿಂಹ, ಸಾಹಿತಿ ಕು.ರಾ.ಸೀತಾರಾಮಶಾಸ್ತ್ರಿ, ಬೆಳ್ಳಾವೆ ನರಹರಿಶಾಸ್ತ್ರಿ, ನಿರ್ಮಾಪಕ-ನಿರ್ದೇಶಕರಾಗಿ ದಕ್ಷಿಣ ಭಾರತದಲ್ಲಿ ದೊಡ್ಡ ಹೆಸರು ಮಾಡಿದ ಬಿ.ಆರ್. ಪಂತುಲು, ಆರ್. ನಾಗೇಂದ್ರರಾಯರು ಹಾಗೂ ಮತ್ತೊಂದು ಸಂಸ್ಥೆಯನ್ನು ಕಟ್ಟಿದ ಎಂ.ವಿ. ಸುಬ್ಬಯ್ಯನಾಯ್ಡು ಅವರೂ ಗುಬ್ಬಿ ಕಂಪನಿಯಲ್ಲಿದ್ದವರೇ. ಮುಂದೆ ಕನ್ನಡ ರಂಗಭೂಮಿ ಮತ್ತು ಚಲನಚಿತ್ರರಂಗದಲ್ಲಿ ಪ್ರಯೋಗ ನಡೆಸಿದ ಬಿ.ವಿ. ಕಾರಂತರ ವೃತ್ತಿ ಬದುಕು ಆರಂಭಗೊಂಡಿದ್ದು ಗುಬ್ಬಿ ಕಂಪೆನಿಯಲ್ಲಿ. ಸಾಹಿತಿ ದೇವುಡು ನರಸಿಂಹಶಾಸ್ತ್ರಿಯಂತಹವರ ಚಲನಚಿತ್ರಾಸಕ್ತಿಗೆ ವೇದಿಕೆಯೊದಗಿಸಿದ್ದೇ ಗುಬ್ಬಿ ಕಂಪನಿ. ರಾಜ್‌ರವರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು ನಟಿಸಿದ ಏಕೈಕ ಚಿತ್ರ ಗುಬ್ಬಿ ಕಂಪೆನಿಯ ತಯಾರಿಕೆಯೇ ಆಗಿದೆ. ಈ ಗುಬ್ಬಿ ಕಂಪನಿಯ ನಾಟಕಗಳ ಪರದೆಯಲ್ಲಿ ಮೊಟ್ಟ ಮೊದಲ ಬಾರಿಗೆ ತಿರುಗುವಂತಹ ರಂಗಮಂಟಪವನ್ನು ತಯಾರಿಸಿ ಹೊಸ ಬಗೆಯ ಕ್ರಾಂತಿಯನ್ನು ಮೂಡಿಸಿ ಸಿನಿಮಾ ರಂಗಕ್ಕೆ ಅದ್ಭುತ ಕೊಡುಗೆಯಾಗಿದೆ. ಈಗಲೂ ಗುಬ್ಬಿ ಕಂಪೆನಿಯ ಒಡೆಯರ ವಂಶವೃಕ್ಷವನ್ನು ಅರಸಿ ಹೋದರೆ ಕನ್ನಡ ಚಿತ್ರರಂಗ ಮತ್ತು ಟಿವಿ ರಂಗಗಳಲ್ಲಿ ಅದರ ಶಾಖೋಪಶಾಖೆಗಳು ಹರಡಿ ಹೋಗಿರುವುದು ಅರಿವಾಗುತ್ತದೆ.

ಅರಮನೆಯ ಕಂಪನಿ ನಾಟಕಗಳನ್ನು ಸಾರ್ವಜನಿಕರಿಗೆ ಪ್ರದರ್ಶಿಸುತ್ತಿದ್ದರೂ ದಕ್ಷಿಣ ಕರ್ನಾಟಕದ ಹಲವೆಡೆ ಸ್ವತಂತ್ರ ನಾಟಕ ಕಂಪನಿಗಳು ಸ್ಥಾಪನೆಯಾದವು. ಮಂಡ್ಯದಲ್ಲಿದ್ದ ರಂಗಾಚಾರ್ಯರು ಕಟ್ಟಿದ ರಾಜಧಾನಿ ನಾಟಕ ಮಂಡಳಿ (1881), ರಸಿಕ ಮನೋಲ್ಲಾಸಿನಿ ನಾಟಕ ಮಂಡಳಿ (1883) ಶ್ರೀ ಸರಸ್ವತಿ ವಿಲಾಸ ಕರ್ನಾಟಕ ಸಭೆ, ಬೆಂಗಳೂರಿನ ಶ್ರೀ ಕಂಠೇಶ್ವರ ಕರ್ನಾಟಕ ನಾಟಕ ಸಭೆ, ಗೊಲ್ಲರಪೇಟೆ ನಾಟಕ ಸಭೆ, ಬುಳ್ಳಪ್ಪನವರ ಕಂಪನಿ ಹೀಗೆ ಆರಂಭ ಕಾಲದಲ್ಲಿ ಮೈಸೂರು, ಬೆಂಗಳೂರು ಸುತ್ತಮುತ್ತ ಅನೇಕ ಕಂಪನಿಗಳು ಮೂಡಿದವು. ಆದರೆ ಕನ್ನಡ ವೃತ್ತಿರಂಗಭೂಮಿ ಸಾರ್ವಜನಿಕರಲ್ಲಿ ಮೂಡಿಸಿದ ಕಲಾಭಿಮಾನವನ್ನೇ ಬಂಡವಾಳ ಮಾಡಿಕೊಂಡು, ತಮ್ಮ ಸಂಘಟನಾ ಚಾತುರ್ಯ ಮತ್ತು ನಿರಂತರ ಪ್ರಯೋಗಶೀಲತೆಯಿಂದ ಕೆಲವರು ಬೃಹತ್ ಸಂಸ್ಥೆಗಳನ್ನು ಹುಟ್ಟು ಹಾಕಿದರು. ಈ ಸಂಸ್ಥೆಗಳೇ ಮುಂದೆ ಕನ್ನಡ ಚಲನಚಿತ್ರರಂಗದ ಗತಿಯನ್ನು ನಿರ್ದೇಶಿಸಿದವು. ಅವುಗಳಲ್ಲಿ ಮುಖ್ಯವಾದವು ಶ್ರೀ ಗುಬ್ಬಿ ಚನ್ನ ಬಸವೇಶ್ವರ ಕೃಪಾಪೋಷಿತ ನಾಟಕ ಸಂಘ (ಗುಬ್ಬಿ ಕಂಪನಿ ಎಂದೇ ಜನಪ್ರಿಯ) ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ (ಎಸ್.ಎಸ್.ಎಸ್. ಕಂಪನಿ ಅಥವಾ ಸುಬ್ಬಯ್ಯನಾಯ್ಡು ಕಂಪನಿ) ಟೈಗರ್ ವರದಾಚಾರ್ಯರ ರತ್ನಾವಳಿ ಥಿಯೇಟ್ರಿಕಲ್ಸ್, ಪೀರ್ ಸಾಹೇಬರ ಚಂದ್ರಕಲಾ ನಾಟಕ ಮಂಡಳಿ, ಹಿರಣ್ಣಯ್ಯ ಮಿತ್ರ ಮಂಡಳಿ ಹಾಗೂ ಜೊತೆಗೆ ಉತ್ತರ ಕರ್ನಾಟಕದಲ್ಲಿ ಅನೇಕ ನಾಟಕ ಮಂಡಳಿಗಳು ಹುಟ್ಟಿ ವೃತ್ತಿರಂಗಭೂಮಿಯನ್ನು

ಶ್ರೀಮಂತಗೊಳಿಸಿವೆ. ಅದರಲ್ಲಿ ಮುಖ್ಯವಾಗಿ ಬೆಳಗಾವಿ ಜಿಲ್ಲೆಯ ಹಲಸಗಿ ನಾಟಕ ಮಂಡಳಿ 1878–79ರಲ್ಲಿ ಪ್ರಾರಂಭವಾಯಿತು. 1886ರಲ್ಲಿ ಧಾರವಾಡದ 'ತಂತುಪುರಸ್ಥ ನಾಟಕ ಮಂಡಳಿ', ಹುಲಿಮನೆ ಸೀತಾರಾಮ ಶಾಸ್ತ್ರೀಯವರ 'ಜಯಕರ್ನಾಟಕ ನಾಟಕ ಮಂಡಳಿ', ಹಂದಿಗನೂರು ಸಿದ್ದರಾಮಪ್ಪನವರ 'ವಿಶ್ವರಂಜನ ನಾಟಕ ಮಂಡಳಿ', ಗಂಗೂಬಾಯಿ ಗುಳೇದಗುಡ್ಡ ಅವರ 'ಶ್ರೀಕೃಷ್ಣ ನಾಟಕ ಕಂಪನಿ', ಲಕ್ಷೇಶ್ವರ 'ಬಚ್ಚಾಸಾನಿ ಸ್ತ್ರೀನಾಟಕ ಮಂಡಳಿ', ದೇಸಾಯಿ ರಾಮರಾಯರ 'ಕೊಪ್ಪಳ ಸಂಗೀತ ನಾಟಕ ಮಂಡಳಿ', ಕೊಪ್ಪಳದ ಇರಕಲ್ ಗಡಾದ ಕಟ್ಟಿಮನಿ ಸಹೋದರಿಯರು 1948ರಲ್ಲಿ ಸ್ಥಾಪಿಸಿದ 'ನಟರಾಜ ನಾಟ್ಯಸಂಘ ಕೊಪ್ಪಳ', ಕೊಪ್ಪಳದ ಬಸರಳ್ಳಿಯ 'ಚಂದ್ರೋದಯ ಸಂಗೀತ ನಾಟಕ ಮಂಡಳಿ'(1950), ಕುಕನೂರಿನ ರೆಹಮಾನವ್ವ ಕಲ್ಮನಿಯವರ 'ಶ್ರೀ ಲಲಿತಕಲಾ ನಾಟ್ಯಸಂಘ'(1950), ಪಿ.ಬಿ. ಧುತ್ತರಗಿಯವರ 'ಶ್ರೀ ಸಿದ್ದಶಕ್ತಿ ಕೃಪಾಪೋಷಿತ ನಾಟ್ಯ ಸಂಘ', ಗದಗಿನ ಕುಮಾರೆ 22/65 ಯಲಬುರ್ಗಾದ 'ಶ್ರೀ ತೋಂಟದಾರ್ಯ ನಾಟ್ಯಸಂಘ ಮಂಡಲಗಿರಿ', ಎನ್.ಬಸವ ಕಂಪನಿ, ಎಲ್.ಬಿ.ಶೇಖ್ ಮಾಸ್ತರರ 'ಸಂಗಮೇಶ್ವರ ನಾಟ್ಯಸಂಘ', 'ಹುಚ್ಚೇಶ್ವರ ನಾಟ್ಯಸಂಘ ಕಲಬುರಗಿ'(ಮುಖ್ಯಸ್ಥರು– ಬಿ.ಆರ್.ಅರಿಷಿಣಗೋಡಿ), ಸಂಗಮೇಶ್ವರ ನಾಟಕ ಮಂಡಳಿ ಗುಡಗೇರಿ(ಮು–ಎನ್.ಬಸವರಾಜ), ಮಹಾಂತೇಶ್ವರ ನಾಟಕ ಮಂಡಳಿ ಗದಗ(ಮಹಾಂತೇಶ), ವೀರೇಶ್ವರ ನಾಟಕ ಮಂಡಳಿ ಗದಗ(ವೀರೇಶ್ವರ ಹಿರೇವಾಡ), ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ ಸುಳ್ಯ(ಸುಳ್ಯದ ದೇಸಾಯಿ), ಗುರುಪ್ರಸಾದ ನಾಟ್ಯಸಂಘ ಕಡಪಟ್ಟಿ (ಪ್ರಕಾಶ ಕಡಪಟ್ಟಿ ), ವೀರಭದ್ರೇಶ್ವರ ನಾಟ್ಯಸಂಘ ಬೆಳವಣಿಕೆ(ಬೆಳವಣಿಕೆ ಸಂಗಪ್ಪ), ಮಹೇಶ್ವರ ನಾಟ್ಯಸಂಘ ನ್ಯಾಮತಿ(ಶಾಂತಪ್ಪ ನ್ಯಾಮತಿ), ಶ್ರೀ ಓಂಕಾರೇಶ್ವರ ನಾಟ್ಯಸಂಘ ಚಿತ್ರದುರ್ಗ (ಓಬಳೇಶ ಬಿ.), ಶ್ರೀ ಅಮರೇಶ್ವರ ನಾಟ್ಯಸಂಘ(ರಾಮರಾವ ದೇಸಾಯಿ) ಇವುಗಳಲ್ಲದೆ ಇನ್ನೂ ಅನೇಕ ವೃತ್ತಿ ನಾಟಕ ಮಂಡಳಿಗಳು ಉತ್ತರ ಕರ್ನಾಟಕದಲ್ಲಿವೆ. ಈ ಮೇಲೆ ಹೇಳಿದ ಕಂಪನಿಗಳಲ್ಲಿ ಇನ್ನೂ ಕೆಲವು ಕಂಪನಿಗಳು ಉಳಿದುಕೊಂಡು ಅನೇಕ ಪ್ರದರ್ಶನಗಳನ್ನು ನೀಡುತ್ತಿದ್ದಾರೆ. ಇಷ್ಟಲ್ಲದೆ ಇತ್ತೀಚೆಗೆ ಕೆಲವು ಕಲಾವಿದರು ಚಲನಚಿತ್ರದಲ್ಲಿ ನಟರಾಗಿ ಕನ್ನಡ ರಂಗಭೂಮಿಯನ್ನು ವಿಸ್ತರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಹೀಗೆ ಹತ್ತೊಂಬತ್ತನೆಯ ಶತಮಾನದ ಅಂತ್ಯ ಹಾಗೂ ಇಪ್ಪತ್ತನೆಯ ಶತಮಾನದ ಪ್ರಾರಂಭದ ಅವಧಿಯಲ್ಲಿ ಉತ್ತರ ಕರ್ನಾಟಕ ರಂಗಭೂಮಿ ತನ್ನ ಕಾಲ ಮೇಲೆ ನಿಂತುಕೊಳ್ಳಲು ತುಂಬಾ ಶ್ರಮ ವಹಿಸಿದೆ. ಈ ಅವಧಿಯಲ್ಲಿ ಹೊಸ ನಾಟಕಗಳು ರಚನೆಗೊಂಡು ಹೊಸದಾಗಿ ಪ್ರಯೋಗಗಳನ್ನು ಕಂಡವು. ಹಲವಾರು ವಿದ್ವಾಂಸರು, ಕಲಾವಿದರು ರಂಗಭೂಮಿಗಾಗಿ ತಮ್ಮ ಜೀವಿತವನ್ನು ಮುಡಿಪಾಗಿಟ್ಟರು. ಈ ಭಾಗದ ಅನೇಕ ಕಂಪನಿಗಳು 1930ರ ನಂತರ, ಕಂದಗಲ್ ಹನುಮಂತರಾಯರ 'ಅಕ್ಷಯಾಂಬರ', 'ಚಿತ್ರಾಂಗದ', 'ರಕ್ತರಾತ್ರಿ', 'ಲಂಕಾದಹನ' ಮೊದಲಾದ ನಾಟಕಗಳನ್ನು ಅಭಿನಯಿಸಿದವು. ಪ್ರಸ್ತುತದಲ್ಲಿಯೂ ಕೆಲವು ಸಾಹಿತಿಗಳು ತಮ್ಮದೇ ಆದ ಕೊಡುಗೆಯನ್ನು ನೀಡುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ರಂಗಭೂಮಿ ಮತ್ತು ಚಿತ್ರರಂಗದ ತಂತು ಮತ್ತೆ ಕೂಡಿ ನವೀಕರಣಗೊಂಡದ್ದು ಎಪ್ಪತ್ತರ ದಶಕದಲ್ಲಿ. ಈ ಬಾರಿ ಹವ್ಯಾಸಿ ರಂಗಭೂಮಿಯು ಚಲನಚಿತ್ರಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡಿತು. ಹವ್ಯಾಸಿ ರಂಗಭೂಮಿಯ ಪ್ರತಿಭೆಗಳು ಒಟ್ಟುಗೂಡಿ ನಿರ್ಮಿಸಿದ ಅಭಿಜಾತ ಚಿತ್ರವೆಂದರೆ 'ಸಂಸ್ಕಾರ'. ಬೆಂಗಳೂರಿನ ಹವ್ಯಾಸಿ ರಂಗಭೂಮಿ ಹಾಗೂ ಇಂಗ್ಲಿಷ್ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದ ಗಿರೀಶ್ ಕಾರ್ನಾಡ್, ಪಿ.ಲಂಕೇಶ್, ಸ್ನೇಹಲತಾ ರೆಡ್ಡಿ, ದಾಶರಥಿ ದೀಕ್ಷಿತ್ ಬೆಂಗಳೂರು–ಮದರಾಸಿನ ಹವ್ಯಾಸಿ ತಂಡದ ನಟ–ನಟಿಯರು

'ಸಂಸ್ಕಾರ' ಚಿತ್ರದಲ್ಲಿ ನಟಿಸಿದರು. ಸಂಸ್ಕಾರದ ಯಶಸ್ಸು ಹವ್ಯಾಸಿ ರಂಗಭೂಮಿಯ ಬಹುದೊಡ್ಡ ವಲಸೆಯನ್ನು ಉದ್ಘಾಟಿಸಿತು. ಸಂಸ್ಕಾರ ಚಿತ್ರವನ್ನು ಅನುಸರಿಸಿ ನಿರ್ಮಾಣಗೊಂಡ ಸಮಾನಾಂತರ ಚಿತ್ರಗಳಲ್ಲಿ ಬಹಳಷ್ಟು ಚಿತ್ರಗಳನ್ನು ನಿರ್ಮಿಸಿ, ನಿರ್ದೇಶಿಸಿದವರು, ಅಭಿನಯಿಸಿದವರು ಹವ್ಯಾಸಿ ನಾಟಕ ರಂಗದ ಪ್ರತಿಭೆಗಳೇ ಆಗಿದ್ದರು. ಪುಣೆಯ ರಾಷ್ಟ್ರೀಯ ಚಲನಚಿತ್ರ ತರಬೇತಿ ಸಂಸ್ಥೆಯಲ್ಲಿ ನಿರ್ದೇಶನ ಕಲಿತು ಬಂದ ಗಿರೀಶ್ ಕಾಸರವಳ್ಳಿಯವರು ಹಾಗೂ ಸಾಹಿತಿ ಬರಗೂರು ರಾಮಚಂದ್ರಪ್ಪನವರು ಮಾತ್ರ ಅದಕ್ಕೆ ಅಪವಾದ. ಮುಂದೆ ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸಿದ ಚಿತ್ರಗಳನ್ನು ರೂಪಿಸಿದ ಗಿರೀಶ್ ಕಾರ್ನಾಡ್, ಬಿ.ವಿ. ಕಾರಂತ, ಟಿ.ಎಸ್. ರಂಗಾ, ಎಂ.ಬಿ.ಎನ್. ಪ್ರಸಾದ್, ಟಿ.ಎಸ್. ನಾಗಾಭರಣ, ಚಂದ್ರಶೇಖರ ಕಂಬಾರ, ಎಂ.ಎಸ್. ಸತ್ಯು, ಸಿ.ಆರ್. ಸಿಂಹ ಹಾಗೂ ಕಲಾವಿದರಾದ ಅನಂತ್‌ನಾಗ್, ವೆಂಕಟರಾವ್ ತಲಗೇರಿ, ಎಲ್.ವಿ. ಶಾರದಾ, ಶಂಕರ್‌ನಾಗ್, ಲೋಕೇಶ್, ವೈಶಾಲಿ ಕಾಸರವಳ್ಳಿ, ಅರುಂಧತಿ ನಾಗ್, ಉಮಾಶ್ರೀ, ಸುರೇಶ್ ಹೆಬ್ಳೀಕರ್, ಟಿ.ಎನ್. ಸೀತಾರಾಂ, ಎಚ್.ಜಿ.ಸೋಮಶೇಖರರಾವ್, ದತ್ತಾತ್ರೇಯ, ಸಿ.ಎಚ್.ಲೋಕನಾಥ್, ಕೋಕಿಲಾ ಮೋಹನ್, ದೇವರಾಜ್, ಸುಂದರ್‌ರಾಜ್, ಕಾಶಿ, ಜಗದೀಶ್ ಮಲ್ನಾಡ್ ಮುಂತಾದವರು ಹವ್ಯಾಸಿ ರಂಗಭೂಮಿಯಿಂದ ಬಂದವರು. ಅಲ್ಲದೆ ತಾಂತ್ರಿಕ ವರ್ಗದಲ್ಲಿ ಸಿ. ಅಶ್ವಥ್ (ಸಂಗೀತ ನಿರ್ದೇಶಕ), ಶಶಿಧರ ಅಡಪ (ಕಲೆ), ರಮೇಶ್ ದೇಸಾಯಿ (ಕಲೆ), ವೈಶಾಲಿ ಕಾಸರವಳ್ಳಿ (ವಸ್ತ್ರ ವಿನ್ಯಾಸ), ಜಯಶ್ರೀ (ಗಾಯಕಿ, ನಟಿ), ಟಿ.ಎನ್. ನರಸಿಂಹನ್ (ನಟ, ನಿರ್ದೇಶಕ) ಮೊದಲಾದವರು ಕನ್ನಡ ಚಿತ್ರರಂಗಕ್ಕೆ ಹೆಚ್ಚು ಸೋಪಜ್ಞತೆಯನ್ನು ತಂದಿದ್ದಾರೆ.

ಕರ್ನಾಟಕದಾದ್ಯಂತ ಚದುರಿದಂತಿದ್ದ ಅನೇಕ ನಾಟಕ ಕಂಪೆನಿಗಳ ಕಲಾವಿದರೇ ಆರಂಭದಲ್ಲಿ ಚಲನಚಿತ್ರಗಳಲ್ಲಿ ಕಲಾವಿದರ ಕೊರತೆಯನ್ನು ತುಂಬಿದರು. ಮುಖ್ಯವಾಗಿ ಮಹಿಳೆಯರು ಸಿನೆಮಾಗಳಲ್ಲಿ ನಟಿಸಲು ಹಿಂಜರಿಯುತ್ತಿದ್ದ ಆ ಕಾಲದಲ್ಲಿ ನಾಯಕಿಯರು, ಪೋಷಕ ಸ್ತ್ರೀ ಪಾತ್ರಗಳ ಅಭಾವವನ್ನು ನೀಗಿಸಿದವರು. ವೃತ್ತಿ ರಂಗಭೂಮಿಯ ಉಚ್ಛ್ರಾಯದ ಕಾಲದಲ್ಲಿ ಕರ್ನಾಟಕ, ಆಂಧ್ರ, ತಮಿಳುನಾಡಿನ ಜನರಿಂದ ಅತ್ಯುತ್ತಮ ನಟಿಯರೆಂದು ಪ್ರಖ್ಯಾತರಾಗಿದ್ದ ಲಕ್ಷ್ಮೀಬಾಯಿ, ಕಮಲಾಬಾಯಿ, ಮಳವಳ್ಳಿ ಸುಂದರಮ್ಮ, ಅಶ್ವತ್ಥಮ್ಮ, ಬಿ. ಜಯಮ್ಮ, ಗಂಗೂಬಾಯಿ ಗುಳೇದಗುಡ್ಡ, ಮುಂದೆ ಮುಂಬೈ ಚಿತ್ರರಂಗದಲ್ಲಿ ಗಾಯಕಿಯಾಗಿ ಹೆಸರು ಮಾಡಿದ ಅಮೀರ್‌ಬಾಯಿ ಕರ್ನಾಟಕ, ಉಮಾಶ್ರೀ, ಮಂಜುಳಾ, ಎಂ.ವಿ. ರಾಜಮ್ಮ, ಪಂಡರೀಬಾಯಿ, ಬಳ್ಳಾರಿ ಲಲಿತಾ, ಹರಿಣಿ, ಬಳ್ಳಾರಿ ರತ್ನಮಾಲಾ, ಬಿ.ಜಯಶ್ರೀ ಮುಂತಾದ ಹಿರಿಯ ನಟಿಯರೆಲ್ಲ ರಂಗಭೂಮಿಯಿಂದ ತಾಲೀಮು ಪಡೆದವರೇ ಆಗಿದ್ದರು.

ಕನ್ನಡ ಚಿತ್ರರಂಗದ ನವೋದಯ ಕಾಲದ ನಾಯಕರಾದ ಡಾ.ರಾಜ್‌ಕುಮಾರ್, ಉದಯಕುಮಾರ್, ಕಲ್ಯಾಣಕುಮಾರ್, ಕೆ.ಎಸ್. ಅಶ್ವಥ್ ಮೊದಲಾದವರು ನಾಟಕರಂಗದ ಸಮೃದ್ಧ ಅನುಭವದೊಡನೆಯೇ ಆಗಮಿಸಿದವರು. ಕುಮಾರತ್ರಯರು, ಕೆ.ಎಸ್. ಅಶ್ವಥ್, ಬಾಲಕೃಷ್ಣ, ನರಸಿಂಹರಾಜು, ಜಿ.ವಿ. ಅಯ್ಯರ್, ರಂಗಾಯಣ ರಘು, ಅಚ್ಯುತ ಕುಮಾರ್, ಮಂಡ್ಯ ರಮೇಶ್, ನಿನಾಸಂ ಸತೀಶ್ ಮೊದಲಾದ ರಂಗ ಪ್ರತಿಭೆಗಳು ಕನ್ನಡ ಚಲನಚಿತ್ರ ರಂಗವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದರು.

ಹೀಗೆ ಕನ್ನಡ ರಂಗಭೂಮಿ ಮತ್ತು ಚಿತ್ರರಂಗದಲ್ಲಿ ಸಮಾನ ಆಸಕ್ತಿಯಿಂದ ತೊಡಗಿಕೊಂಡಿದ್ದ ಪ್ರತಿಭೆಗಳು ಕನ್ನಡ ಚಿತ್ರರಂಗವನ್ನು ಮುನ್ನಡೆಸಿದವು. ಆದರೆ ಅರವತ್ತರ ದಶಕದಲ್ಲಿ ರಂಗಪ್ರತಿಭೆಗಳು ಚಿತ್ರರಂಗಕ್ಕೆ ಬರುವುದು ಬಹುತೇಕ ಸ್ಥಗಿತಗೊಂಡಿತು. ಇದಕ್ಕೆ

ಕಾರಣಗಳು ಹಲವಾರು. ಚಿತ್ರರಂಗದ ಪ್ರಭಾವಕ್ಕೆ ವೃತ್ತಿ ರಂಗಭೂಮಿಗಳು ಕಾಲ್ತೆಗೆಯಬೇಕಾಯಿತು. ಆ ವೇಳೆಗೆ ಸಿನಿಮಾ ಕ್ಷೇತ್ರ ವಿವಿಧ ಕ್ಷೇತ್ರಗಳ ಆಸಕ್ತರನ್ನು ಸೆಳೆಯತೊಡಗಿತ್ತು. ರಂಗಭೂಮಿಯ ಅನುಭವವನ್ನು ದುಡಿಸಿಕೊಳ್ಳುವ ಬಗ್ಗೆ ನಿರ್ದೇಶಕರು ಗಂಭೀರವಾಗಿ ಪರಿಗಣಿಸಲಿಲ್ಲ. ಅಲ್ಲೊಂದು ಇಲ್ಲೊಂದು ರಂಗಪ್ರತಿಭೆಗಳು ಆಗಾಗ್ಗೆ ಚಿತ್ರರಂಗಕ್ಕೆ ಬಂದಿಳಿದರೂ ಹಿಂದಿನ ರಂಗಭೂಮಿಯ ವಲಸೆ ವಿರಳವಾಗಿತ್ತು. ರಾಜೇಶ್, ಶ್ರೀನಾಥ್, ಗಂಗಾಧರ್ ಅವರಂಥ ಹವ್ಯಾಸಿ ರಂಗಭೂಮಿಯ ನಟರು ಮಾತ್ರ ಇದಕ್ಕೆ ಅಪವಾದವೆನಿಸಿದ್ದರು.

ಭಾರತೀಯ ಚಲನಚಿತ್ರೋದ್ಯಮವು ತನ್ನ ಆರಂಭದ ದಿನಗಳಲ್ಲಿ ಕಥಾವಸ್ತುವಿಗೆ ಸಂಪೂರ್ಣವಾಗಿ ತನ್ನ ಸಂಸ್ಕೃತಿಯಲ್ಲಿ ಸಂಪದ್ಭರಿತವಾಗಿದ್ದ ಪುರಾಣದ ಕತೆಗಳು, ಚಾರಿತ್ರಿಕ ಘಟನೆಗಳು ಮತ್ತು ಜಾನಪದದ ರಮ್ಯಲೋಕವನ್ನೇ ನೆಚ್ಚಿಕೊಂಡಿತ್ತು. ಭಾರತೀಯ ಪ್ರೇಕ್ಷಕನ ಮನಸ್ಸು ತನ್ನ ಪರಂಪರೆಯ ಪೌರಾಣಿಕ ಕತೆಗಳಿಗೆ, ಜಾನಪದ ಲೋಕಕ್ಕೆ ಮತ್ತು ಚಾರಿತ್ರಿಕ ಸನ್ನಿವೇಶಗಳಿಗೆ ಮತ್ತೆ ಮತ್ತೆ ಹಿಂದಿರುಗಿ ಆನಂದ ಪಡೆಯುವ ಉಪಾಧಿಗೆ ಒಗ್ಗಿಕೊಂಡಿತ್ತು. ಚಿತ್ರ ನಿರ್ಮಾಪಕರು–ನಿರ್ದೇಶಕರು ಪ್ರೇಕ್ಷಕನ ಅಂತರಂಗವನ್ನು ಬಂಡವಾಳ ಮಾಡಿಕೊಂಡು ಪುರಾಣೇತಿಹಾಸದ ಕತೆಗಳನ್ನೇ ಚಿತ್ರ ಮಾಡಿದರು ಎನ್ನುವುದಕ್ಕಿಂತ ಕಠಿಣತೆಯನ್ನು ತೆಗೆದುಕೊಳ್ಳಲು ಬಯಸದೆ ಸುಲಭವಾದ ಸಿದ್ಧ ಶೈಲಿಯ ನಾಟಕಗಳ ಕತೆಗಳನ್ನು ಅಳವಡಿಸಿದರು ಎನ್ನುವುದೇ ಸೂಕ್ತ. ರಂಗಭೂಮಿಯು ಪುರಾಣೇತಿಹಾಸ, ಜಾನಪದ ಕತೆಗಳನ್ನು ಅತಿರಂಜಿತಗೊಳಿಸಿ, ಭ್ರಮಾಲೋಕ ಸೃಷ್ಟಿಸಿ ಪ್ರೇಕ್ಷಕನನ್ನು ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಎರಡೇ ಆಯಾಮದ ತೆರೆಯ ಮೇಲೆ ಮೂರು ಆಯಾಮದ ದೃಶ್ಯಾವಳಿಗಳನ್ನು ಸೃಜಿಸಬಲ್ಲ ಸಿನಿಮಾ ಎಂಬ ಅದ್ಭುತ ಮಾಧ್ಯಮವು ರಂಗಭೂಮಿಗಿದ್ದ ಕ್ರಿಯಾಶೀಲತೆಯನ್ನು ಮತ್ತಷ್ಟು ಹಿಗ್ಗಿಸಿತು. ಪರಿಣಾಮ– ಸಿನಿಮಾ ಮಾಧ್ಯಮವು ರಂಗಭೂಮಿಗಿಂತ ಬಹುದೊಡ್ಡ ಭ್ರಮಾಲೋಕವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಯಿತು.

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಾದ್ಯಂತ ರಂಗ ಚಟುವಟಿಕೆಗಳು ಹೆಚ್ಚಿನ ಭರಾಟೆ ಕಂಡುಕೊಂಡಿವೆ. ಉತ್ಸಾಹಿ ಯುವಕರ ದಂಡು ಆ ಕ್ಷೇತ್ರದತ್ತ ಲಗ್ಗೆ ಹಾಕಿದೆ. ಚಲನ ಚಿತ್ರರಂಗ ಮತ್ತು ದೂರದರ್ಶನಗಳೆರಡೂ ಉದ್ಯಮದ ಸ್ಥಾನಕ್ಕೇರಿ ಕುಳಿತಿವೆ. ಕಲೆಯನ್ನು ಪ್ರೀತಿಸಿ ಅದರೊಡನೆ ಅನುಸಂಧಾನ ನಡೆಸಿ ಹೊಸದನ್ನು ಅನ್ವೇಷಿಸುವ ಗೀಳಿಗಿಂತ, ಈ ಕ್ಷೇತ್ರಗಳು ತಂದುಕೊಡುವ ದಿಢೀರ್ ಪ್ರಸಿದ್ಧಿ ಮತ್ತು ಹಣ–ಎರಡೇ ಪ್ರಮುಖ ಆಕರ್ಷಣೆಯ ಅಂಶಗಳಾಗಿವೆ. ಇದು ಎಲ್ಲರಿಗೂ ಅನ್ವಯಿಸುವ ಅಭಿಪ್ರಾಯವಲ್ಲವಾದರೂ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಬಹುತೇಕರಿಗೆ ಅನ್ವಯವಾಗುತ್ತದೆ. ದೃಶ್ಯ ಸಂಯೋಜನೆಯ ಗಂಧಗಾಳಿಯೂ ವ್ಯಕ್ತಿಗಳಿಗೆ ಗೊತ್ತಿಲ್ಲದ ಜನರು ಮೆಗಾ ಧಾರಾವಾಹಿಗಳನ್ನು ನಿರ್ದೇಶಿಸುತ್ತಿದ್ದರೆ, ಕಲಾವಿದರ ಅಭಿನಯ ಗಿಳಿಪಾಠ ಒಪ್ಪಿಸುವುದಕ್ಕಷ್ಟೇ ಸೀಮಿತವಾಗಿದೆ. ವೈಚಾರಿಕತೆಯಿಂದ ಮೈಲು ದೂರವಿರುವ ಟಿ.ವಿ. ಧಾರಾವಾಹಿ, ರಿಯಾಲಿಟಿ ಷೋಗಳಲ್ಲಿ ಮಿಂಚಲು ಹಾತೊರೆವ ಸಂಖ್ಯೆಯೇ ಹೆಚ್ಚು. ಇನ್ನು ಚಿತ್ರರಂಗವಂತೂ ರೀಮೇಕ್ ಪಿಡುಗಿನ ಮುಂದೆ ಮಂಡಿಯೂರಿ ಕುಳಿತಿದೆ.

ಒಟ್ಟಿನಲ್ಲಿ, ರಂಗಭೂಮಿ ಚಲನಚಿತ್ರದ ಬೇರುಗಳಿಗೆ ಸಂಬಂಧಿಸಿದ ಕಲಾ ಪರಂಪರೆಯಾಗಿದ್ದರೆ, ಚಲನಚಿತ್ರವು ಆ ಕಲೆಗೆ ಆಧುನಿಕ ತಂತ್ರಜ್ಞಾನ ಮತ್ತು ವಿಶಾಲ ವ್ಯಾಪ್ತಿಯನ್ನು ನೀಡಿದ ಮಾಧ್ಯಮವಾಗಿದೆ. ಎರಡೂ ಪರಸ್ಪರ ಸ್ಪರ್ಧಿಸುವುದಕ್ಕಿಂತ ಪರಸ್ಪರ ಪೂರಕವಾಗಿ ಬೆಳೆಯಬೇಕಾಗಿದೆ. ಹೊಸ ತಂತ್ರಜ್ಞಾನಗಳನ್ನು ಸ್ವೀಕರಿಸುವುದರ ಜೊತೆಗೆ ರಂಗಭೂಮಿಯ ಜೀವಂತಿಕೆ, ಮಾನವೀಯತೆ ಮತ್ತು ಕಲಾತ್ಮಕ ಮೌಲ್ಯಗಳನ್ನು ಉಳಿಸಿಕೊಂಡು

ಮುಂದುವರಿಯುವುದು ಅಗತ್ಯ. ಹೀಗೆ ರಂಗಭೂಮಿ ಮತ್ತು ಚಲನಚಿತ್ರಗಳು ಮುಂದಿನ ಪೀಳಿಗೆಯ ಕಲಾ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಬಹುದು.

**ಪರಾಮರ್ಶನ ಗ್ರಂಥಗಳು:**

1. ವಾರ್ತಾಭಾರತಿ ಪತ್ರಿಕೆ (ದಿನಾಂಕ: 28–04–2019), ಮಂಗಳೂರು: ವಾರ್ತಾಭಾರತಿ.
2. ರಂಗನಾಥ ಎಚ್., (2024), ಕರ್ನಾಟಕ ರಂಗಭೂಮಿ, ಬೆಂಗಳೂರು: ಹೇಮಂತ ಸಾಹಿತ್ಯ.
3. ವೆಂಕಟರಾಮ್ ಎನ್. ಎಸ್., (2012), ರಂಗಭೂಮಿ, ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್.